ದಿನಾಂಕಃ 02-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು: ಎದುರುದಾರ ಪರ ಶ್ರೀ ವಿವಿಟಿ ವಕೀಲರಿಂದ:</u>

ಅಪಘಾತದ ಸಮಯದಲ್ಲಿ ನನ್ನ ವಯಸ್ಸು 19 ವರ್ಷ ಇತ್ತು ಎಂದು ತೋರಿಸಲು ಆಧಾರ ಕಾರ್ಡ ಹಾಜರಪಡಿಸಿರುತ್ತೇನೆ. ಅಪಘಾತದ ದಿನದಂದು ನಾನು ಮೃತ ದಾನೇಶ ಜೊತೆಗೆ ಮೋಟರ ಸೈಕಲ್ ಮೇಲೆ ಯಲ್ಲಟ್ಟಿಯಿಂದ ಜಮಖಂಡಿಗೆ ಹೋಗುತ್ತಿದ್ದೆವು. ನಾವು ಹೋಗಿದ್ದ ಮೋಟರ ಸೈಕಲ್ ಹೇಳಲು ಬರುವುದಿಲ್ಲ. ಸದರಿ ಮೋಟರ ಸೈಕಲ್ ಮಾಲೀಕ 1 ನೇ ಎದುರುದಾರ. 1 ನೇ ಎದುರುದಾರ ಮೃತ ದಾನೇಶನ ಸಹೋದರ ಎಂದರೆ ಸರಿ. ಅಪಘಾತದ ದಿನದಂದು ಮೃತ ದಾನೇಶ ವಾಹನ ಚಲಾಯಿಸಲು ಪರವಾನಿಗೆ ಹೊಂದಿರಲಿಲ್ಲ. ಆ ದಿನ ಮೃತ ದಾನೇಶ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ದಾನೇಶ ಹೆಲ್ಮೆಟ್ ಧರಿಸಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಾವು ಹೋಗಿದ್ದ ಮೋಟರ ಸೈಕಲ್ ನ ನೋಂದಣಿ ಅವಧಿ ಮುಗಿದಿತ್ತು ಎಂದರೆ ನನಗೆ ಗೊತ್ತಿಲ್ಲ.

ಅಪಘಾತವು ಎದುರುನಿಂದ ಬಂದ ಮೋಟರ ಸೈಕಲ್ ಸವಾರನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿ. ಆ ದಿನ ಸದರಿ ಮೋಟರ ಸೈಕಲ್ ಸವಾರ ಮಧ್ಯಪಾನ ಮಾಡಿದ್ದ, ವಾಹನ ಚಲಾಯಿಸಲು ಚಾಲನಾ ಪರವಾನಿಗೆ ಹೊಂದಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಪಘಾತವು ಜಮಖಂಡಿ - ಬನಹಟ್ಟಿ ರಸ್ತೆಯ ಲಕ್ಷ್ಮೀ ಗುಡಿಯ ಹತ್ತಿರ ರಸ್ತೆಯ ಮಧ್ಯ ಭಾಗದಲ್ಲಿ ಆಗಿದೆ ಎಂದರೆ ಸರಿಯಲ್ಲ. ನಿಪಿ-57 ರ ಪ್ರಕಾರ ಅಪಘಾತದ ಸ್ಥಳವು ರಸ್ತೆಯ ಮಧ್ಯೆದಲ್ಲಿದೆ ಎಂದರೆ ಸರಿಯಲ್ಲ. ಮೃತ ದಾನೇಶನ ನಿರ್ಲಕ್ಷ್ಯತನದ ಚಾಲನೆಯಿಂದ ಅಪಘಾತವಾಗಿರುತ್ತದೆ ಎಂದು ದೋಷರೋಪಣ ಪತ್ರ ಸಲ್ಲಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

ಅಪಘಾತದ ನಂತರ ನನ್ನನ್ನು ಚಿಕಿತ್ಸೆ ಸಲುವಾಗಿ ಜಮಖಂಡಿ ಕೆಎಲ್ಇ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಆಸ್ಪತ್ರೆಯಲ್ಲಿ ಸುಮಾರು 25 ದಿನಗಳವರೆಗೆ ಚಿಕಿತ್ಸೆ ಪಡೆದಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ನನಗೆ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ತದನಂತರ ಕುಸಬಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಎರಡೂ ಆಸ್ಪತ್ರೆಗಳಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ಚಿಕಿತ್ಸೆ ಸಲುವಾಗಿ ರೂ.1,50,000/- ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಇವತ್ತಿಗೂ ಚಿಕಿತ್ಸೆ ಪಡೆಯುತ್ತಿದ್ದೇನೆ, ಮುಂದಿನ ಚಿಕಿತ್ಸೆಗಾಗಿ 1 ಲಕ್ಷ ರೂಪಾಯಿ ಬೇಕಾಗುತ್ತವೆ ಎಂದು ತೋರಿಸಲು ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತವು ಎರಡೂ ಮೋಟರ ಸೈಕಲ್ ಗಳ ಚಾಲಕರ ತಪ್ಪಿನಿಂದ ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನಾನು ಕೂಲಿ ಕೆಲಸ ಮಾಡಿ ತಿಂಗಳಿಗೆ 30 ಸಾವಿರ ರೂಪಾಯಿ ಸಂಪಾದನೆ ಮಾಡುತ್ತಿದ್ದೆನು ಎಂದು ತೋರಿಸಲು ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತದಲ್ಲಿ ಉಂಟಾದ ಗಾಯಗಳಿಂದ ಶಾಶ್ವತ ಅಂಗನ್ಯೂನ್ಯತೆ ಹೊಂದಿದ್ದು, ಕೆಲಸ ಮಾಡಲು ಬರುವುದಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನಡೆದಾಡಲು, ಕೂಡಲು ಮತ್ತು ಯಾವುದೇ ಕೆಲಸ ಮಾಡಲು ಬರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತಕ್ಕಿಂತ ಪೂರ್ವದಲ್ಲಿ ಹೇಗೆ ಇದ್ದೇನೊ ಈಗ ಹಾಗೇ ಇದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ದಾಖಲೆಗಳನ್ನು ಹಾಜರಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರ ಸವಾರ ಮತ್ತು ಹಿಂಬದಿ ಸವಾರ ಕಂತನ್ನು ಕಟ್ಟದೆ ಇರುವುದರಿಂದ 4 ನೇ ಎದುರುದಾರ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2025.07.02 17:35:34 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ